**ಸಾಕ್ಷಿಯನ್ನು ದಿಃ *07/08/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಜೆಬಿಪಿ ವಕೀಲರಿಂದ ವಾದಿ ಪರವಾಗಿ.***

ನನಗೆ ಪ್ರಸ್ತುತ ದಾವೆಯ ಪಕ್ಷಗಾರರ ಕುರಿತು ಮತ್ತು ಯಾರ ಯಾರ ವಿರುದ್ದ ದಾವೆ ಮಾಡಿದ್ದಾರೆ ಎಂದು ಹೇಳಲು ಬರುವುದಿಲ್ಲ. ದಾವಾದಾಸ್ತಿಯ ಸರ್ವೇ ನಂಬರ ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ. ದಾವೆಯ ವ್ಯಾಜ್ಯಾಂಶ ಸಹ ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದ 1 ನೇ ಖಂಡಿಕೆಯಲ್ಲಿರುವ ಅಕ್ರಮ ಸಕ್ರಮ ಆಸ್ತಿಯ ನಂಬರ ಮತ್ತು ಕ್ಷೇತ್ರ ಅದರ ಪ್ರತಿಫಲ ವಗೈರೆ ನನಗೆ ಹೇಳಲು ಬರುವುದಿಲ್ಲ. ದಿಃ25-06-2009 ರಂದು ಮಾಡಿಕೊಂಡಿದ್ದಾರೆ ಎಂದು ಹೇಳಲಾದ ದಾಖಲೆ ನಾನು ನೋಡಿಲ್ಲ. ನನ್ನ ಪ್ರಮಾಣಪತ್ರದಲ್ಲಿ 2 ನೇ ಖಂಡಿಕೆಯಲ್ಲಿ ಬರೆಯಲಾದ ಹಿಂದಿನ ಕೇಸಿನ ರಾಜಿ ಕುರಿತು ಇರುವ ವಿವರಗಳು ನನಗೆ ಗೊತ್ತಿಲ್ಲ. ಈ ರೀತಿ 10 ಲಕ್ಷ ರೂಪಾಯಿಗಳು ಕೊಟ್ಟಿರುವ ಮುಖಾಂತರ ರಾಜಿ ಮಾಡಿರುವ ಆಸ್ತಿ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ರಾಜಿಡಿಕ್ರಿಯಲ್ಲಿ ಮಧ್ಯಸ್ಥಿಕೆ ಮಾಡಿರುವ ಕುರಿತು ಇರುವ ದಾಖಲಾತಿಯಲ್ಲಿ ನನ್ನ ಸಹಿ ಇರುವುದಿಲ್ಲ.

ಸುಕನ್ಯಾ ಬಡಿಗೇರ ಇವರು ಮನೆ ಕಟ್ಟಿ ಅಂದಾಜು 15 ವರ್ಷಗಳಾಗಿರಬಹುದು, ಗೃಹ ಪ್ರವೇಶಕ್ಕೆ ಹೋಗಿರುತ್ತೇನೆ. ಸದರಿ ಮನೆಯನ್ನು ಯಾವ ಸರ್ವೇ ನಂಬರನಲ್ಲಿ ಕಟ್ಟಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸದರಿ ಮನೆ ಕಟ್ಟುವಿಕೆಗೆ ಅವರು ಪರವಾನಿಗೆ ಪಡೆದಿದ್ದರು ಇಲ್ಲವೊ ನನಗೆ ಗೊತ್ತಿಲ್ಲ. ವಾದಿಯಾದ ಛಾಯಾ ಯಾದವಾಡ ಇವರು ಖರೀದಿಸಿದ ಆಸ್ತಿ ನಂಬರ ನನಗೆ ಹೇಳಲು ಬರುವುದಿಲ್ಲ ಮತ್ತು ನನಗೆ ಗೊತ್ತಿಲ್ಲ. ಸದರಿ ಸುಖನ್ಯಾ ನನಗೆ 30 ವರ್ಷಗಳಿಂದ ಪರಿಚಯವಿರುತ್ತಾರೆ. ದಾವಾದಾಸ್ತಿ ಮತ್ತು ವ್ಯಾಜ್ಯಾಂಶ ವಗೈರೆ ಗೊತ್ತಿಲ್ಲದೆಯಿದ್ದರೂ ಸಹ ಸುಖನ್ಯಾ ಬಡಿಗೇರ ಇವರು ನಮ್ಮ ಸಮಾಜದ ವ್ಯಕ್ತಿ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರದ ಮೂಲಕ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.